ಉಪನಿರ್ದೇಶಕರು (ಆಡಳಿತ) ರವರ ಕಚೇರಿ

ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 33K– ದ್ವಿತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** | **ಸಮಯ : 03.00 ಗಂಟೆಗಳು**

*********************************************************************************

## ಅಭ್ಯಾಸ ಪತ್ರಿಕೆ–4

*********************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. ಕೆಳಗಿನವುಗಳಲ್ಲಿ ದ್ವಿರುಕ್ತಿ ಪದವಿದು.
   ಅ) ಮೊಟ್ಟಮೊದಲು ಆ) ಕಾಡುಮೇಡು
   ಇ) ಕಿಲಕಿಲ ಈ) ಬೆನ್ತಟ್ಟು
2. 'ವಿದ್ಯಾರ್ಥಿ' ಪದದ ಅನ್ಯಲಿಂಗ ರೂಪವಿದು.
   ಅ) ವಿದ್ಯಾರ್ಥಿಗಳು ಆ) ವಿದ್ಯಾರ್ಥಿಗೆ
   ಇ) ವಿದ್ಯಾರ್ಥಿನಿ ಈ) ವಿದ್ಯಾರ್ಥಿಯರು
3. 'ಬವಣೆ' ಪದಕ್ಕೆ ಅರ್ಥವಿದು.
   ಅ) ಬಣವೆ ಆ) ಒಣಗಿ
   ಇ) ಮಂದಾರ ಈ) ಕಷ್ಟ
4. 'ಮೂವತ್ತು, ನಲವತ್ತು' ಪದಗಳು ನಾಮಪದದ ಈ ಪ್ರಕಾರಕ್ಕೆ ಉದಾಹರಣೆ.
   ಅ) ಸಂಖ್ಯಾವಾಚಕ ಆ) ನಾಮವಾಚಕ
   ಇ) ವಸ್ತು ವಾಚಕ ಈ) ಗುಣವಾಚಕ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **12 X1=12**

5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?
6. ಈ ನಾಡಿನ ಬೆನ್ನೆಲುಬು ಯಾರು?
7. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?
8. ಹಕ್ಕಿಗಳು ಗೂಡುಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
9. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ?
10. ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?
11. ಕವಯಿತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?
12. ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಢಾರ್ಥವೇನು?
13. ತಿಮಿರಕ್ಕೆ ವೈರಿ ಯಾವುದು?
14. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?
15. ಕುಣಿಗಲ್ ಕೆರೆಯಲ್ಲಿ ಎಂತಹ ಮೀನುಗಳಿದ್ದವು?
16. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 X2=16**

17. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?
18. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?
19. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

20. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು?
21. ಥೇಮ್ಸ್ ನದಿಯ ಉತ್ತರ ಮತ್ತು ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ?
22. ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ?
23. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?
24. ಬದುಕ ಬದುವ ಬೇಲಿ ಯಾವ ರೀತಿ ಇದೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

25. ಎಂ. ಗೋಪಾಲಕೃಷ್ಣ ಅಡಿಗ **1 X3=3**

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1X3=3**

26. ಹಸಿ ಸೌದೆ ಬುಸುಗುಟ್ಟಿ **ದನಿಯನೆತ್ತುವುದಲ್ತೆ**
ಕಿಡಿಸೋಕೆ ಮದ್ದು ಸಿಡಿದಬ್ಬರಿಪುದು
ಅಂತಿರದೆ ರವಿಕರಕೆ ಕರಗುವ ಏಬ್ಬನಿವೊಲಿರು
ಸಿಡುಕು ಮಿಡುಕನು ತೊರೆದು ಮೌನಿಯಾಗು.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1X3=3**

27. ಸೀತೆಯ ಮುಖ ಕಮಲದಂತೆ ಅರಳಿತು.

**VII. ಕೆಳಗೆಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1X3=3**

28. ದೇಶ ಸುತ್ತು: ಕೋಶ ಓದು.
**ಅಥವಾ**
ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5 X3=1**

29. ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯಾ?
30. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.
31. ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ.
32. ಪರಹಿತಕ್ಕೆ ಬಳಲುತ್ತಿರಲು ಅದುವೇ ಜೀವನವು.
33. ಎಮ್ಮರಮನೆಯ ನಾರಿಯರೆ ಸಾಕು.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1X4=4**

34. ಕೊರಡ ಕೊನರಿಸಿ__________________________
________________________________________
________________________________________
________________________________ ಮತ್ತೇರಿದೆ.

ಅಥವಾ

ಯುಗದ ಹಿಂದಿನ__________________________
________________________________________
________________________________________
________________________________ ಸವಿಚೈತ್ರವು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1X4=4**

35. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ಅರ್ಥಪೂರ್ಣವಾಗಿ ಬರೆಯಿರಿ.
**ಅಥವಾ**
ನನ್ನ ಗೋಪಾಲ ಪಾಠದಲ್ಲಿ ಬರುವ ಪ್ರಕೃತಿ ವರ್ಣನೆಯನ್ನು ಸ್ವಾರಸ್ಯ ಪೂರ್ಣವಾಗಿ ಬರೆಯಿರಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4(2 +2)**

ರಾತ್ರಿ ಕತ್ತಲಾಯಿತು. ಕತ್ತಲಲ್ಲಿ ಹಾಗೇ ಕುಳಿತಿದ್ದ. ಬೆಳಕಾದಾಗ ಭರತಕುಮಾರ ಹತ್ತಿರವಿದ್ದ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿದ. ಆ ನೀರಿಗೆ ಆತನ ತಾಯಿಯ ಹಾಲಿನ ರುಚಿಯಿತ್ತು. ಹೂವು ಬಿಡಿಸಿ ಕಂಪು ಮೂಡಿಸಿದ. ಅದರಲ್ಲಿ ಆ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು ಮಾತನಾಡಿಸಿದ. ಅದರ ಧನಿಯಲ್ಲಿ ತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದರೆ ಆ ತಾಯಿಯ ಛಾಯೆಯೇ ಕಾಣುತ್ತಿತ್ತು. ಹೀಗೆ ಆ ರಾಜಕುಮಾರ ತನ್ನ ಸುತ್ತ ಮುತ್ತ ತನ್ನ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನೇ ಕಂಡುಕೊಂಡ. ಆ ವೇಳೆಗೆ ಮತ್ತೆ ಕತ್ತಲಾಯಿತು. ಮಲಗಿಬಿಟ್ಟನು. ಕನಸಿನಲ್ಲಿ ತಾಯಿ ಬಂದು ಹೀಗೆಂದಳು. 'ಭರತಕುಮಾರ, ನಾನು ಈ ನೆಲದಲ್ಲಿ ಅಡಗಿ ಹೋಗಿದ್ದೇನೆ, ನೀರಿನಲ್ಲಿ ಕರಗಿ ಹೋಗಿದ್ದೇನೆ, ನಿನ್ನ ರೋದನವನ್ನು ಕೇಳಿ ಕೇಳಿ, ಕೊರಗಿ ಕೊರಗಿ, ಇಲ್ಲೇ ಇದ್ದು ಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೊ'. ಬೆಳಗಾಗಿ ಎದ್ದು ರಾಜಕುಮಾರ ಆ ತನ್ನ ನೆಲವನ್ನೇ ತಾಯಿಯೆಂದು ಭಾವಿಸಿಕೊಂಡ. ಆ ನಾಡನ್ನೇ ಭಾರತ ಮಾತೆಯೆಂದೂ, ತಾಯಿ ಭಾರತಿಯೆಂದೂ ಕರೆಯಲಾರಂಭಿಸಿದ. ಅವನ ಜನರೆಲ್ಲ ಹಾಗೆ ಕರೆದರು, ಆ ಹಿಂದಿನ ಕಾಲದಲ್ಲಿ.

36. ಅ) ರಾಜಕುಮಾರ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನು ಹೇಗೆ ಕಂಡುಕೊಂಡ?

ಆ) ಭರತನ ತಾಯಿ ಕನಸ್ಸಿನಲ್ಲಿ ಬಂದು ಏನೆಂದು ಹೇಳಿದಳು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1X4=4**

37. ಸಾಂಕ್ರಮಿಕ ರೋಗಗಳ ನಿಯಂತ್ರಣದಲ್ಲಿ ಸಾರ್ವಜನಿಕರ ಪಾತ್ರ

ಅಥವಾ

ರಾಷ್ಟ್ರೀಯ ಹಬ್ಬಗಳ ಮಹತ್ವ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 X5=5**

38. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ 'ಅರುಣ'ಎಂದು ಭಾವಿಸಿಕೊಂಡು ಶಾಲೆಯಲ್ಲಿ ವನಮಹೋತ್ಸವ ಆಚರಣೆಗೆ ಸಸಿಗಳನ್ನು ಒದಗಿಸುವಂತೆ ಕೋರಿ ಅರಣ್ಯಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ತುಮಕೂರಿನ 'ರಚನಾ' ಎಂದು ಭಾವಿಸಿಕೊಂಡು ಕೊರೋನಾ ಸಾಂಕ್ರಾಮಿಕ ರೋಗದಿಂದಾದ ಅನಾಹುತಗಳನ್ನು ವಿವರಿಸಿ ಚಿತ್ರದುರ್ಗದಲ್ಲಿರುವ ನಿಮ್ಮ ಗೆಳತಿ 'ರಮಾ' ಗೆ ಒಂದು ಪತ್ರ ಬರೆಯಿರಿ.

★★★★★